ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

ಸಂ:ಕಂ:.ವಿವಾದ:11/2016-17 ದಿ: 25-07-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1) ಹನುಮಂತ ತಂದೆ: ಸಿದ್ದ ರಾಮಪ್ಪ
ಭೈರಾಪುರ ಗ್ರಾಮ
ಸಿರುಗುಪ್ಪ ತಾಲೂಕ

2) ಜಿ. ಮಹೇಶ ಗೌಡ ತಂದೆ: ತಿಪ್ಪನಗೌಡ ಲೇಟ್
23ನೇ ವಾರ್ಡ್1524, ತೋಟಗಾರಿಕೆ ಇಲಾಖೆ ಕಾಂಪೌಂಡ್
ಸಿರುಗುಪ್ಪ ,ತಾಲೂಕ ಸಿರುಗುಪ್ಪ

**ಪ್ರತಿವಾದಿಗಳು**

ಸಿದ್ದಮ್ಮ ಗಂಡ: ಲೇಟ್ ಗೋಸಬಾಳು ಮಲ್ಲೇಶಪ್ಪ
ಗೌಡ್ರ ಪೇಟೆ ಕರೂರು ಗ್ರಾಮ
ಸಿರುಗುಪ್ಪ ತಾಲೂಕ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಡು ಸಂಖ್ಯೆ |
|---|---|---|---|---|
| ಕರೂರು ಗ್ರಾಮ | 37/A1 | 0-59 | H-142/2015-16 | 452/2015-16 |

**ಪೀಠಿಕೆ:-**

ಸಿರುಗುಪ್ಪ ತಾಲೂಕಿನ ಕರೂರು ಗ್ರಾಮದ ಸ.ನಂ.37/A1 ವಿಸ್ತೀರ್ಣ 0-59ಎಕರೆ ಜಮೀನಿಗೆ ಸಂಭಂದಿಸಿದಂತೆ ಸಿರುಗುಪ್ಪ ಸಬ್ ರಿಜಿಸ್ಟರ್‌ಕಛೇರಿ ಖರೀದಿ ಪತ್ರ ನಂ: SRG-1-08991/15-16 Dt. 22-03-2016 ರ ಪ್ರಕಾರ ಹನುಮಂತಪ್ಪ ತಂದೆ: ಲೇಟ್ ಸಿದ್ದ ರಾಮಪ್ಪ ಇವರ ಹೆಸರಿನಲ್ಲಿ ಖಾತೆಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ ಸಿದ್ದಮ್ಮ ಗಂಡ: ಗೋಸಬಾಳು ಮಲ್ಲೇಶಪ್ಪ, ಕರೂರು ಗ್ರಾಮ ಇವರು ದಿ: 11-04-2016 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು ದಿ: 10-06-2016, 24-06-2016, 01-07-2016 ,08-07-2016 ಮತ್ತು 22-07-2016 ರಂದು ಪ್ರಕರಣಕ್ಕೆ ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳಾದ ಹನುಮಂತಪ್ಪ ತಂದೆ: ಲೇಟ್ ಸಿದ್ರಾಮಪ್ಪ ಭೈರಾಪುರ ಗ್ರಾಮ ಇವರು ಕರೂರು ಗ್ರಾಮದ ಸ.ನಂ.37/A1 ವಿಸ್ತೀರ್ಣ 0-59 ಎಕರೆ ಜಮೀನು ಸಿರುಗುಪ್ಪ ಸಬ್ ರಿಜಿಸ್ಟರ್‌ಕಛೇರಿ ಖರೀದಿ ಪತ್ರ ನಂ: SRG-1-08991/15-16 Dt. 22-03-2016 ರ ಪ್ರಕಾರ ಜಿ. ಮಹೇಶಗೌಡ ತಂದೆ: ತಿಪ್ಪನಗೌಡ ಉರುಫ್ ತಿಪ್ಪಣ್ಣ ಇವರಿಂದ ಖರೀದಿ ಹೊಂದಿರುತ್ತಾರೆ. ಹಕ್ಕು ಬದಲಾವಣೆ ಸಂದರ್ಭದಲ್ಲಿ ಸಿದ್ದಮ್ಮ ಲೇಟ್ ಗೋಸಬಾಳು ಮಲ್ಲೇಶಪ್ಪ ಕರೂರು ಇವರು ದಿ:11-04-2016 ರಂದು ವಿನಾಕಾರಣ ದಾಖಲೆ ರಹಿತವಾಗಿ ನಿರಾಧಾರವಾದ ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಸದ್ರಿ ಜಮೀನು ಈ ಹಿಂದೆ ನನ್ನ ತಂದೆಯಾದ ಸಿದ್ರಾಮಪ್ಪ ತಂದೆ: ತಳವಾರ ಈರಪ್ಪ ಇವರು ಜಿ.ಮಲ್ಲೇಶಪ್ಪ ತಂದೆ:ಗೋಸಬಾಳು ಮಲ್ಲಪ್ಪ ಇವರಿಂದ ಸಿರುಗುಪ್ಪ ಉಪನೋಂದಣಿ ಕಛೇರಿ ಪತ್ರ ನಂ: 842/74-75 ದಿ:25-6-1974 ರಲ್ಲಿ ಖರೀದಿ ಹೊಂದಿರುತ್ತಾರೆ. ಮಲ್ಲೇಶಪ್ಪ ತಂದೆ: ಗೋಸಬಾಳು ಮಲ್ಲಪ್ಪ ಇವರು ಮೃತರಾಗಿದ್ದು ಪರಪಾಟಿನಿಂದ ಮತ್ತೊಬ್ಬ ಜಿ. ಮಲ್ಲೇಶಪ್ಪ ತಂದೆ: ಗಾದಿಲಿಂಗಪ್ಪ ಎಂಬುವವರು ಸಿರುಗುಪ್ಪ ಸಬ್ ರಿಜಿಸ್ಟರ್ ಕಚೇರಿ ಪತ್ರ ನಂ: 3862/15-16 ದಿ: 27-08-2015 ರಂದು ಜಿ. ಮಹೇಶ ಗೌಡ ತಂದೆ: ತಿಪ್ಪನಗೌಡ ಉರುಫ್ ತಿಪ್ಪಣ್ಣ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ. ಆದ್ದರಿಂದ ಈಗ ಈ ಬಗ್ಗೆ ದೊಡ್ಡ ಮನುಷ್ಯರಲ್ಲಿ ಪಂಚಾಯಿತಿ ಏರ್ಪಟ್ಟು ಪರಿಷ್ಕಾರ ಮಾಡಿದ ಪ್ರಕಾರ ಮೂಲ ಖರೀದಿದಾರರಾದ ನನ್ನ ತಂದೆ: ಸಿದ್ರಾಮಪ್ಪ ತಂದೆ: ತಳವಾರು ಈರಪ್ಪ ಇವರು ದಿ:06-08-2000 ರಂದು ಮೃತರಾದ ಕಾರಣ ಅವರ ಮಗನದ ಹನುಮಂತಪ್ಪ ತಂದೆ: ಲೇಟ್ ಸಿದ್ರಾಮಪ್ಪ ಎಂಬ ನನ್ನ ಹೆಸರಿಗೆಜಿ. ಮಹೇಶಗೌಡ ತಂದೆ: ತಿಪ್ಪನಗೌಡ ಉರುಫ್ ತಿಪ್ಪಣ್ಣ ಇವರಿಂದ ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿ ಪತ್ರ ನಂ: SRG-1-08991/15-16 Dt. 22-03-2016 ರ ಖರೀದಿ ನೋಂದಣಿ ಪ್ರಕಾರ ಹಕ್ಕು ಬದಲಾವಣೆ ಮಾಡುವಂತೆ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

<u>ಪ್ರತಿವಾದಿಗಳು</u>

ಪ್ರತಿವಾದಿಗಳಾದ ಸಿದ್ದಮ್ಮ ಗಂಡ: ದಿವಂಗತ ಗೋಸಬಾಳು ಮಲ್ಲೇಶಪ್ಪ ಕರೂರು ಇವರು ಕರೂರು ಗ್ರಾಮದ ಸ.ನಂ.37/A1 ವಿಸ್ತೀರ್ಣ 0-59 ಎಕರೆ ಜಮೀನು ಸಿರುಗುಪ್ಪ ಸಬ್ ರಿಜಿಸ್ಟರ್‌ಕಛೇರಿ ಖರೀದಿ ಪತ್ರ ನಂ: SRG-1-08991/15-16 Dt. 22-03-2016 ರ ಪ್ರಕಾರ ಜಿ. ಮಹೇಶಗೌಡ ತಂದೆ: ತಿಪ್ಪನಗೌಡ ಉರುಫ್ ತಿಪ್ಪಣ್ಣ ಇವರಿಂದ ಖರೀದಿಹೊಂದಿ ಹಕ್ಕುಬದಲಾವಣೆ ಸಂದರ್ಭದಲ್ಲಿ ದಿ:11-04-2016 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ದಿ:01-07-2016 ರಂದು ವಿಚಾರಣೆಗೆ ಹಾಜರಾಗಿ ನನ್ನ ಗಂಡನಾದ ಗೋಸಬಾಳು ಮಲ್ಲೇಶಪ್ಪ ಇವರ ಹೆಸರಿನಲ್ಲಿರುವ ಸ.ನಂ.37ಎ1 ವಿಸ್ತೀರ್ಣ 0-59 ಎಕರೆ ಜಮೀನು ನನ್ನ ಗಂಡನು ಖರೀದಿಸಿದ ಆಸ್ತಿಯಾಗಿರುತ್ತದೆ. ನನ್ನ ಗಂಡನು ದಿ:19-02-2002 ರಂದು ಮೃತಪಟ್ಟಿರುತ್ತಾರೆ. ಈ ಜಮೀನನ್ನು ನನ್ನದೇ ಎಂದು ಮೋಸದಿಂದ ಹಾಗೆಯೇ ಜಿ.ಮಹೇಶಗೌಡ ತಂದೆ: ತಿಪ್ಪನಗೌಡ ಉರುಫ್ ತಿಪ್ಪಣ್ಣ, 22ನೆ ವಾರ್ಡ್, ಸಿರುಗುಪ್ಪ ಇವರಿಗೆ ದಿ:27-8-2015 ರಂದು ಕ್ರಯಕ್ಕೆ ಮಾಡಿಸಿರುತ್ತಾರೆ. ದಿ:22-4-2016 ರಂದು ಜಿ. ಮಹೇಶ ಗೌಡ ತಂದೆ: ತಿಪ್ಪನಗೌಡ ಉರುಫ್ ತಿಪ್ಪಣ್ಣ ಇವರು ಹನುಮಂತಪ್ಪ ತಂದೆ: ದಿವಂಗತ ಸಿದ್ದರಾಮಪ್ಪ ಈತನಿಗೆ ಸದ್ರಿ ಭೂಮಿಯನ್ನು ಮಾರಾಟ ಮಾಡಿರುತ್ತಾರೆ. ಇವರೆಲ್ಲರೂ ಸೇರಿ ಮೋಸದಿಂದ ನನ್ನ ಜಮೀನು ಅಕ್ರಮವಾಗಿ ತಮ್ಮ ಹೆಸರಿಗೆ ಕ್ರಯನೋಂದಣಿ ಮಾಡಿಕೊಂಡಿ ರುತ್ತಾರೆ. ಇವರು ಮೋಸದಿಂದ ಖರೀದಿ ಮಾಡಿರುವ ಜಮೀನನ್ನು ಬದಲಾವಣೆ ಮಾಡಬಾರದೆಂದು ತಕರಾರು ಅರ್ಜಿ ಸಲ್ಲಿಸಿರುತ್ತೇನೆ, ಎಂದು ವಿಚಾರಣೆ ಸಮಯದಲ್ಲಿ ದಿ:01-07-2016 ರಂದು ಲಿಖಿತ ಹೇಳಿಕೆ ನೀಡಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ಸಿರುಗುಪ್ಪ ಸಬ್ ರಿಜಿಸ್ಟರ್‌ಕಛೇರಿ ಖರೀದಿ ಪತ್ರ ನಂ: SRG-1-08991/15-16 Dt. 22-03-2016 ರ ಪ್ರಕಾರ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## <u>ಆದೇಶ</u>

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಕರೂರು ಗ್ರಾಮದ ಸ.ನಂ.37/A1 ವಿಸ್ತೀರ್ಣ 0-59 ಎಕರೆ ಜಮೀನು ಸಿರುಗುಪ್ಪ ಸಬ್‌ರಿಜಿಸ್ಟರ್ ಕಛೇರಿ ಖರೀದಿ ಪತ್ರ ನಂ: SRG-1-08991/15-16 Dt. 22-03-2016 ರ ಪ್ರಕಾರ ಹನುಮಂತ ತಂದೆ: ಸಿದ್ದರಾಮಪ್ಪ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 29-07-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಸಿರುಗುಪ್ಪ,

ಇದರ ಪ್ರತಿಯನ್ನು:
1. ವಾದಿ ಹಾಗೂ ಪ್ರತಿವಾದಿಗಳು